# ಕರವ ಮುಗಿದ ಮುಖ್ಯಪ್ರಾಣ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
3. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
4. **Note:** Lyrics given without highlights are as per Ref. 2. The wordings in Ref. 2 are similar to Ref. 1 except few minor differences which are given in yellow highlights. The lyrics as per Ref. 3 are slightly different and are given in blue highlights.
5. **Note:** Singer has followed lyrics mainly as in Ref. 2. But there are a mix of wordings from Ref. 1.
6. **Note:** The Ankita is different in the above referred books. Singer has also used a different Ankita. We have considered Ref.1 as standard and taken that Ankita for listing.

ರಾಗ: ಕಾಪಿ ತಾಳ: ಛಾಪು

ಕರವ ಮುಗಿದ
ಮುಖ್ಯಪ್ರಾಣ ಕರವ ಮುಗಿದ || ಪ ||

ಕರವ ಮುಗಿದ (ಶ್ರೀಹರಿಗೆ ಎದುರಾಗಿ) (ಶ್ರೀಹರಿಯ ಇದಿರಾಗಿ)
ದುರುಳರ (ಜರಿದು) (ಸದೆದು) ಶರಣರ ಪೊರೆಯೆಂದು || ಅಪ ||

ಜೀವೇಶರೈಕ್ಯ ಜಗತು ಮಿಥ್ಯ ಎಂದು
ಈ ವಿಧ ಪೇಳುವ ಮಾಯಿಗಳನಳಿಯೆಂದು || ೧ ||

ಇಲ್ಲಿ ಮಾತ್ರವು ಭೇದ, ಅಲ್ಲಿ ಒಂದೇ ಎಂಬ
ಕ್ಷುಲ್ಲಕರನು ಪಿಡಿದ್ವಲ್ಲು ಮುರೀಯೆಂದು || ೨ ||

ತಾರತಮ್ಯ ಪಂಚಭೇದ ಸತ್ಯವೆಂಬ
ಮಾರುತ ಮತ ಪೊಂದಿದವರನು (ನೀ ಕಾಯೆಂದು) (ಸಲಹೆಂದು) || ೩ ||

ಪರಿಪರಿ ಭಕ್ತರ ಹೃದಯದೊಳಗೆ ನಿಂತು
ನಿರತ ಮಾಡುವ ಕರ್ಮ ಹರಿಗೆ ಅರ್ಪಿತವೆಂದು || ೪ ||

ಹರಿ ಮಾಡೋ ವ್ಯಾಪಾರ ಬಲ್ಲ ಕಾರಣ ನಮ್ಮ
(ಪುರಂದರ ವಿಠ್ಠಲನ ಚರಣಕ್ಕೆರಗಿ ನಿಂತು) || ೫ ||
(ಸಿರಿ ಪುರಂದರ ವಿಠ್ಠಲಗೆರಗಿ ನಿಂತು)

**Note:** The lyrics given below in blue highlights are as per Ref. 3 above.

ರಾಗ: ಕಾಪಿ ತಾಳ: ಛಾಪು

ಕರವ ಮುಗಿದ
ಮುಖ್ಯಪ್ರಾಣ ಕರವ ಮುಗಿದ || ಪ ||

ಕರವ ಮುಗಿದ ಶ್ರೀಹರಿಗೆ ತಾನೆದುರಾಗಿ
ದುರುಳರ ಸದೆದು ನೀ ಶರಣರ ಪೊರೆಯೆಂದು || ಅಪ ||

ಜೀವೇಶರೈಕ್ಯವು ಜಗತು ಮಿಥ್ಯವೆಂದು
ಈ ವಿಧ ಪೇಳುವ ಮಾಯಿಗಳನಳಿಯೆಂದು || ೧ ||

ಇಲ್ಲಿ ಮಾತ್ರವು ಭೇದ, ಅಲ್ಲಿ ಒಂದೇ ಎಂಬ
ಕ್ಷುಲ್ಲಕರನು ಪಿಡಿದು ಹಲ್ಲಳ ಮುರಿಯೆಂದು || ೨ ||

ತಾರತಮ್ಯ ಪಂಚಭೇದ ಸತ್ಯವೆಂಬ
ಮಾರುತ ಮತ ಪೊಂದಿದವರನು ಪೊರೆಯೆಂದು || ೩ ||

ಪರಿಪರಿ ಭಕ್ತರು ಹೃದಯ ಕಮಲದೊಳು
ನಿರುತ ಮಾಡುವ ಪೂಜೆ ನಿನಗರ್ಪಿತವೆಂದು || ೪ ||

ಹರಿಯ ಮನೋಗತವರಿತು ಮಾಡುವೆನೆಂದು
ಪುರಂದರ ವಿಠ್ಠಲನ ಚರಣದ ಬಳಿಯಲ್ಲಿ || ೫ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ದುರುಳ** = ಕೆಟ್ಟವನು, ದುಷ್ಟ, ನೀಚ

**ಮಾಯಿ** = ಮಿಥ್ಯವಾದಿ, ವಂಚಕ

**ನಿರತ** = ಆಸಕ್ತ, ತೊಡಗಿಸಿಕೊಂಡ

**ತಾರತಮ್ಯ...** – ವಿವರಣೆಗೆ ಪ್ರಸ್ತಾವನೆ ನೋಡಿ.

**ಜೀವೇಶರೈಕ್ಯ...** – ಜೀವಾತ್ಮ, ಪರಮಾತ್ಮರಲ್ಲಿ ಭೇದವಿರದು; ಪ್ರಪಂಚವು ಮಿಥ್ಯಾರೂಪವಾದದ್ದು ಎಂಬ ಮಾಯಾವಾದದ ಪ್ರಮೇಯಗಳು; ಇವು ಅದ್ವೈತಮತದ ಪ್ರಕ್ರಿಯೆಗಳೆಂದು ವಿದ್ಯಾರಣ್ಯರ ಕಾಲದಿಂದ ನಂಬಿಕೆ ಬಂದಿದೆ. ಆದರೆ ಶಂಕರಾಚಾರ್ಯರ ಭಾಷ್ಯ ಗ್ರಂಥಗಳಲ್ಲಿ ಇವು ಕಾಣುವುದಿಲ್ಲ. ವಿಶಿಷ್ಟ ಅದ್ವೈತ ಮತದ ತತ್ವಗಳು. ಇದಕ್ಕೆ ವೈಷ್ಣವ ಮತ ಮತ್ತು ರಾಮಾನುಜ ಮತಗಳೆಂಬ ಬೇರೆ ಹೆಸರುಗಳಿವೆ. ಇಲ್ಲಿ ಜೀವ ಮತ್ತು ಈಶ ಭೇಧವಿದ್ದರೂ ಮೋಕ್ಷ ಸ್ಥಿತಿಯಲ್ಲಿ ಜಗತ್ ಕರ್ತೃತ್ವ ಮತ್ತು ಲಕ್ಷ್ಮೀ ಪತಿತ್ವಗಳನ್ನು ಬಿಟ್ಟು ಉಳಿದ ೩ ಅಂಶಗಳಲ್ಲಿ ಭೇಧವಿಲ್ಲವೆಂಬುದೇ ಮತದ ವಾದ.

**ಇಲ್ಲಿ ಮಾತ್ರ ಭೇದ...** – ಅದ್ವೈತ ವಾದದ ಮೂಲ ತತ್ವಗಳು. ಸಂಸಾರಾವಸ್ಥೆಯಲ್ಲಿ ಜೀವಾತ್ಮ ಪರಮಾತ್ಮರು ವಿಭಿನ್ನರು, ಆದರೆ ಮುಕ್ತಿಯ ಅವಸ್ಥೆಯಲ್ಲಿ ಅವರೊಳಗೆ ಭೇದವಿಲ್ಲ ಎನ್ನುವ ಭೇದಾಭೇದವಾದ.

**ಪರಿಪರಿ ಭಕ್ತರ...** – ಅವರವರ ಯೋಗ್ಯತಾನುಸಾರವಾಗಿ.

**ಸದೆ** = ನಾಶ ಮಾಡು

**ಮಾರುತ ಮತ =** ದ್ವೈತ ಮತ.  ಶ್ರೀ ಮಧ್ವಾಚಾರ್ಯರು ವಾಯು ದೇವರ ಅವತಾರವಾದುದರಿಂದ ಅವರು ಪ್ರತಿಪಾದಿಸಿದ ಮತವು ಮಾರುತ ಮತ ಎಂದೆನಿಸುತ್ತದೆ.

**ತಾರತಮ್ಯ =** ಇದರ ಬಗ್ಗೆ ಈ ಹಾಡನ್ನು - ಸತ್ಯ ಜಗಕಿದು ಪಂಚ ಭೇಧವು ....... ನೋಡಿರಿ.

**ಹರಿಯ ಮನೋಗತವರಿತು ಮಾಡುವೆನೆಂದು : -** ಪರಮಾತ್ಮನ ಸಂಕಲ್ಪವನ್ನನುಸರಿಸಿ ವಾಯು ದೇವರು ಕಾರ್ಯ ಪ್ರವೃತ್ತರಾಗುತ್ತಾರೆ.

**Classification:** Keerthane
**Ankita:** purandara vittala
**Location:** NA
**Category:** Hanuma Stuti, Madhwacharya Stuti
**Sub-Category:** hanuma, kai, Krishna, taratamya, satya, jiva, esha, loka, hrudaya, hanuma-bhima-madhva, karma, vyapara, sharana,
**Pravachana:** NA
**Explanation:** NA